ದಿನಾಂಕಃ**24-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ **2** ನೇ ಎದುರುದಾರರ ಪರ ಶ್ರೀ ಸಿ ಒ ವೈ ವಕೀಲರ ಪರವಾಗಿ ಶ್ರೀ ಎಸ್ ಪಿ ವಕೀಲರಿಂದಃ

1. ನಾವು ಆ ದಿನ ಪ್ಯಾಸೆಂಜರ್ ಆಟೋದಲ್ಲಿ ನಾನು, ನನ್ನ ಗಂಡ ಮತ್ತು ನನ್ನ ಮಗು ಪ್ರಯಾಣಿಸುತ್ತಿದ್ದೆವು. ನಾವು ಆ ದಿನ ಶೆಟ್ಟಿಕೊಪ್ಪದಿಂದ ಹೊಸ್ಕೆರೆಗೆ ಹೋಗುತ್ತಿದ್ದೆವು. ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು ಆಸ್ಪತ್ರೆಯಲ್ಲಿ ಇದ್ದಾಗ ದಿನಾಂಕಃ15.05.2023 ರಂದು ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಅಪಘಾತದಿಂದಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂಬುದರ ಬಗ್ಗೆ

ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ನಾನು ಮೊದಲು ಸರ್ಕಾರಿ ಆಸ್ಪತ್ರೆ, ನ ರಾ ಪುರದಲ್ಲಿ ಚಿಕಿತ್ಸೆ ಪಡೆದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಪುಷ್ಪ ಆಸ್ಪತ್ರೆ, ನ ರಾ ಪುರ , ನಂತರ ಗುತ್ತಿ ಮಲ್ನಾಡ್ ಆಸ್ಪತ್ರೆ, ಶಿವಮೊಗ್ಗದಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಪುನಃ ನಾನು ನ ರಾ ಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ಪುಷ್ಪ ಆಸ್ಪತ್ರೆಯಲ್ಲಿ ಯಾವುದೇ ಶಸ್ತ್ರ ಚಿಕಿತ್ಸೆಗೆ ಒಳಪಡಿಸಿರುವುದಿಲ್ಲ. ನಾನು ಶಿವಮೊಗ್ಗದ ಗುತ್ತಿ ಮಲ್ನಾಡ್ ಆಸ್ಪತ್ರೆಯಲ್ಲಿ 3 ದಿನಗಳ ಕಾಲ ಒಳ ರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ಸದರಿ ಆಸ್ಪತ್ರೆಯಲ್ಲಿ ಒಂದು ಬಾರಿ ಶಸ್ತ್ರ ಚಿಕಿತ್ಸೆಗೆ ಒಳಪಡಿಸಿರುತ್ತಾರೆ. ದಿನಾಂಕ:15.05.2023 ರಂದು ಅಪಘಾತ ಆಗಿದ್ದು , ದಿನಾಂಕ:17.05.2023 ರಂದು ದೂರು ಕೊಟ್ಟಿರುತ್ತೇವೆ ಎಂದರೆ ಸರಿ .

3. ಅಪಘಾತ ಆಗುವ ಕಾಲಕ್ಕೆ ನಾನು ಬೆಂಗಳೂರಿನ ಕೈರಳಿ ನಿಲಯಂ ಸೆಂಟ್ರಲ್ ಸ್ಕೂಲ್ ನಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ. ಅಪಘಾತದಿಂದ ನನಗೆ ಸಾಮಾನ್ಯ ಸ್ವರೂಪದ ಗಾಯಗಳು ಉಂಟಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗಾಗಿ ರೂ.3 ಲಕ್ಷ ಹಣ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಂದುವರಿದ ಚಿಕಿತ್ಸೆಗೆ ರೂ. 1 ಲಕ್ಷದ ಅವಶ್ಯಕತೆ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದಾದ ಗಾಯಗಳಿಂದ ನಾನು ಸಂಪೂರ್ಣವಾಗಿ ಗುಣಮುಖಳಾಗಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿನ ರೀತಿ ಈಗಲೂ ಕೆಲಸ ಮಾಡಲು ಶಕ್ತಳು ಇರುತ್ತೇನೆ ಎಂದರೆ ಸರಿಯಲ್ಲ. ಆ ದಿನ 1 ನೇ ಎದುರುದಾರರು ಹೆಚ್ಚಿನ ಪ್ರಯಾಣಿಕರನ್ನು ಆಟೋದಲ್ಲಿ ಕೂರಿಸಿಕೊಂಡು ಹೋಗಿ ನಿಯಂತ್ರಣ ತಪ್ಪಿ ಅವರ ತಪ್ಪಿನಿಂ ದ ಅಪಘಾತ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಳ್ಳು ವಿಚಾರಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಹೆಚ್ಚಿನ ಪರಿಹಾರ ಕೋರಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ನಂತರ ನಾನು ಯಾವುದೇ ಗಳಿಕೆ ರಜೆಯನ್ನು ಪಡೆದುಕೊಂಡಿರುವುದಿಲ್ಲ. ಆ ದಿನ ರಸ್ತೆಯಲ್ಲಿ ಯಾವುದೋ ಪ್ರಾಣಿ ಬಂದ ಕಾರಣ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: **1** ನೇ ಎದುರುದಾರರ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದ:</u>

ದೂರಿನಲ್ಲಿ ನಾನು ಶಿಕ್ಷಕಿಯಾಗಿ ಕೆಲಸ ಮಾಡುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ಅಪಘಾತ ಆಗುವ ಕಾಲಕ್ಕೆ ನಾನು ನೌಕರಿಯನ್ನು ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾಗುವ ಕಾಲಕ್ಕೆ ನಾನು ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ ಎಂಬ ಬಗ್ಗೆ ದಾಖಲೆ

ಹಾಜರುಪಡಿಸಬಹುದು ಎಂದರೆ ಸರಿ. ಹಿರೇಭೀಸು ಗ್ರಾಮಕ್ಕೆ ಎನ್ ಆರ್ ಪುರ ಮುಖ್ಯ ರಸ್ತೆಯಿಂದ ಒಳಗೆ ಹೋಗಬೇಕು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ದೂರಿನಲ್ಲಿ ಅಪಘಾತ ಹಿರೇಭೀಸು ಬಳಿ ಆಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಆ ದಿನ ಆಟೋದಲ್ಲಿ ನಾನು, ನನ್ನ ಗಂಡ ಮತ್ತು ನನ್ನ ಮಗು ಮಾತ್ರ ಪ್ರಯಾಣಿಸುತ್ತಿದ್ದೆವು ಎಂದರೆ ಸರಿ. 1 ನೇ ಎದುರುದಾರರು ಆಟೋ ಚಲಾಯಿಸುವ ಕಾಲಕ್ಕೆ ಸಮವಸ್ತ್ರ, ಚಾಲನಾ ಪರವಾನಿಗೆ ಪತ್ರ ಹಾಗೂ ಸದರಿ ಆಟೋಕ್ಕೆ ವಿಮೆಯನ್ನು ಹೊಂದಿದ್ದರು ಎಂದರೆ ಸರಿ. ಆ ದಿನ ಆಟೋ ಚಾಲಕನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಆಟೋ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ :: ಇಲ್ಲ ::</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.

ಸಾಕ್ಷಿದಾರರ ಸಹಿ :